ಒ ಎಸ್ 146/2024 ಪಿ.ಡಬ್ಲ್ಯೂ 1

ಇಂದು ದಿಃ 23.07.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್ ಯು ವಕೀಲರಿಂದಃ

ನಾನು ವಿದ್ಯಾಭ್ಯಾಸ ಮಾಡಿಲ್ಲ. ಅದೇ ರೀತಿ ಇತರೆ ವಾದಿಗಳು ಸಹ ಓದಿಲ್ಲ. ನಮಗೆ ಗಂಡು ಹಾಗೂ ಹೆಣ್ಣು ಮಕ್ಕಳು ಇದ್ದಾರೆ. ನನ್ನ ಮಕ್ಕಳು ಸಹ ಹೆಚ್ಚಿಗೆ ಓದಿಲ್ಲ. ದಾವಾ ಆಸ್ತಿಗಳು 2010ರ ಹಿಂದೆ ಅಂದರೆ ಸುಮಾರು 15 ವರ್ಷಗಳ ಹಿಂದೆ ಒಟ್ಟು ಕುಟುಂಬದ ಆಸ್ತಿಯಾಗಿತ್ತು ಎಂದರೆ ಸರಿಯಲ್ಲ. 2010ರಲ್ಲಿ ನಮ್ಮನ್ನು ಒಂದೇ ದಿನ ತಾಲ್ಲೂಕು ಕಛೇರಿಗೆ ಕರೆದುಕೊಂಡು ಹೋಗಿದ್ದರು. ನಮ್ಮನ್ನು ಯಾರು ಕರೆದುಕೊಂಡು ಹೋಗಿರಲಿಲ್ಲ ನಾವೆ ಹೋಗಿದ್ದೆವು. ನೊಂದಾವಣಿ ಕಛೇರಿಗೆ ಹೋದಾಗ ನಮ್ಮ ಹೆಬ್ಬೆಟ್ಟು ಹಾಗೂ ಛಾಯಾಚಿತ್ರ ತೆಗೆದುಕೊಂಡರು ಎಂದರೆ ನನಗೆ ಗೊತ್ತಿಲ್ಲ. ನಾವು ಹೋದ ದಿನ ಅಂದರೆ ಅದೇ ದಿನ ನಮ್ಮ ಹೆಬ್ಬೆಟ್ಟು ಹಾಗೂ ಛಾಯಾಚಿತ್ರ ತೆಗೆದುಕೊಂಡರು ಎಂದರೆ ಸರಿ. ದಿ.04.06.2010ರಂದು ನಾನು ಮತ್ತು ನನ್ನ ಅಕ್ಕ ತಂಗಿಯರು ನೊಂದವಣಿ ಕಛೇರಿಗೆ ಮಾರಾಟ ಮಾಡಲು ಹೋಗಿದ್ದರು ಎಂದರೆ ಸರಿ. ಆ ದಿನ ಸರ್ವೆ ನಂ.16ರಲ್ಲಿ 2 ಎಕರೆ 13 ಗುಂಟೆ ಜಮೀನಿನ ಮಾರಾಟಕ್ಕೆಂದು ಹೋಗಿದ್ದೆವು ಎಂದರೆ ಸರಿ. ಮಾರಾಟವಾದ ನಂತರ ನಾವು ಉಪ ನೊಂದಣಿ ಕಛೇರಿಗೆ ಹೋಗಿರುವುದಿಲ್ಲ. ಮಾರಾಟವಾದ ಒಂದು ವಾರ ಬಿಟ್ಟು ದಿನಾಂಕ 11.06.2010ರಂದು ನಾನು ಮತ್ತು ಅಕ್ಕತಂಗಿಯರು ಹಾಗೂ ಪ್ರತಿವಾದಿಗಳು ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡೆವು ಎಂದರೆ ಅದನ್ನು ಮಾಡಿದ್ದು ನನಗೆ ಗೊತ್ತಿಲ್ಲ ಎನ್ನುತ್ತಾರೆ.ದಿ.11.06.2010ರ ವಿಭಾಗ ಪತ್ರದಲ್ಲಿ ನಮಗೇನು ಕೊಡಬೇಕು ಕೊಟ್ಟಿದ್ದಾರೆ ಎಂದರೆ ನಮಗೇನು ಕೊಟ್ಟಿಲ್ಲ ಎನ್ನುತ್ತಾರೆ. ಈ ಮೊದಲೇ ಆಸ್ತಿಗಳು ವಿಭಾಗ ಆದ ಕಾರಣ ಮತ್ತೊಮ್ಮೆ ವಿಭಾಗ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಇತ್ತೀಚೆಗೆ 1 ಎಕರೆ ಜಮೀನಿನ ಮೌಲ್ಯ 40 ರಿಂದ 50 ಲಕ್ಷ ಜಾಸ್ತಿಯಾದ ಕಾರಣ ಆಸ್ತಿಯನ್ನು ಪಡೆದುಕೊಳ್ಳಲು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಮಾರಾಟವಾದ ದಿನವೇ ಆಸ್ತಿಗಳು ಒಟ್ಟುಕುಟುಂಬದ ಆಸ್ತಿ ಎಂದು ತಿಳಿದಿತ್ತು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.